**ದಿನಾಂಕ:21-03-2023 ರಂದು ನಡೆದ ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರದ 58ನೇ ತಾಂತ್ರಿಕ ಸಮಿತಿ ಸಭೆಯ ನಡವಳಿಗಳು**

ಮುಖ್ಯ ಮೌಲ್ಯಮಾಪನಾಧಿಕಾರಿಗಳು, ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ ಹಾಗೂ ತಾಂತ್ರಿಕ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಇವರು ಸಭೆಯ ಅಧ್ಯಕ್ಷರು, ತಾಂತ್ರಿಕ ಸಮಿತಿಯ ಸದಸ್ಯರು, ಪ್ರಾಧಿಕಾರದ ಅಧಿಕಾರಿಗಳು ಮತ್ತು ವಿವಿಧ ಇಲಾಖೆಯ ಪ್ರತಿನಿಧಿಗಳನ್ನು ಸ್ವಾಗತಿಸಿದರು.

ಕಾರ್ಯಸೂಚಿಯಂತೆ ಕರಡು ಉಲ್ಲೇಖದ ನಿಯಮಗಳನ್ನು ಹಾಗೂ ಮೌಲ್ಯಮಾಪನ ವರದಿಯ ಮುಖ್ಯಾಂಶಗಳನ್ನು ಸಂಬಂಧ ಪಟ್ಟ ಅಧಿಕಾರಿಗಳಿಂದ ಹಾಗೂ ಸಮಾಲೋಚಕ ಸಂಸ್ಥೆಗಳಿಂದ ಪ್ರಸ್ತುತ ಪಡಿಸಲಾಯಿತು, ವಿವರವಾದ ಚರ್ಚೆಯ ನಂತರ ಅಧ್ಯಯನವಾರು ಸಲಹೆ/ ಸೂಚನೆಗಳನ್ನು ಈ ಕೆಳಗಿನಂತೆ ನೀಡಲಾಗಿದೆ.

| ಉಲ್ಲೇಖದ ನಿಯಮಗಳು | | |
|---|---|---|
| 1 | Evaluation of Impact of Livelihood Component of MGNREGS on the individual and community during the period from 2017-18 to 2022-23<br><br>**ಯೋಜನೆ ಅನುಷ್ಠಾನ ಇಲಾಖೆ:**<br>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಯಾವುದೇ ಮಾರ್ಪಾಡು ಇಲ್ಲದೇ ಉಲ್ಲೇಖದ ನಿಯಮಗಳನ್ನು ಅನುಮೋದಿಸಲಾಯಿತು. |
| 2 | Evaluation of Impact of activities under the Natural Resources Management (NRM) Components of MGNREGS during 2017-18 to 2022-23<br><br>**ಯೋಜನೆ ಅನುಷ್ಠಾನ ಇಲಾಖೆ:**<br>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಯಾವುದೇ ಮಾರ್ಪಾಡು ಇಲ್ಲದೇ ಉಲ್ಲೇಖದ ನಿಯಮಗಳನ್ನು ಅನುಮೋದಿಸಲಾಯಿತು. |
| 3 | Evaluation of SCP/TSP scheme to increase enrolment and access to quality education to SC/ST students | ತಾಂತ್ರಿಕ ಸಮಿತಿಯಿಂದ ನೀಡಿರುವ ಈ ಕೆಳಗಿನ ಸಲಹೆ/ಸೂಚನೆಗಳನ್ನು ಅಳವಡಿಸುವ ಸೂಚನೆಯೊಂದಿಗೆ ಉಲ್ಲೇಖದ ನಿಯಮಗಳನ್ನು ಅನುಮೋದಿಸಲಾಯಿತು.<br>1. ಸದರಿ ಉಲ್ಲೇಖದ ನಿಯಮದಲ್ಲಿ ಶಾಲೆಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮಕ್ಕಳ ಸ್ಥಿತಿಗತಿಗಳ ಮಾಹಿತಿ ಹಾಗೂ ಶಾಲೆಯಿಂದ |

| | | |
|---|---|---|
| | **ಯೋಜನೆ ಅನುಷ್ಠಾನ ಇಲಾಖೆ:**<br>ಸಮಾಜ ಕಲ್ಯಾಣ ಇಲಾಖೆ & ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ | ಹೊರಗುಳಿದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮಕ್ಕಳ ಮಾಹಿತಿಯ ಆಧಾರದ ಮೇಲೆ ಯೋಜನೆಯ ಪರಿಣಾಮವನ್ನು ಮೌಲ್ಯಮಾಪನ ಮಾಡಲು ಸೂಚಿಸಲಾಯಿತು. (To evaluate on the basis of baseline data/ information)<br>2. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಕುಟುಂಬದವರಿಗೆ ಸರ್ಕಾರದಿಂದ ಒದಗಿಸುತ್ತಿರುವ ಇತರೆ ಸೌಲಭ್ಯಗಳ ಬಗ್ಗೆ ಮಾಹಿತಿ ಇರುವ ಕುರಿತು ಪ್ರಶ್ನಾವಳಿಯಲ್ಲಿ ಸೇರಿಸಲು ಸೂಚಿಸಲಾಯಿತು.<br>3. ಸರ್ಕಾರದ ಯೋಜನೆಗಳನ್ನು ಪಡೆದ ಫಲಾನುಭವಿಗಳ ಸಾಮಾಜಿಕ ಸ್ಥಿತಿಗತಿಗಳಲ್ಲಿ ಸುಧಾರಣೆ ಕುರಿತು ಮಾಹಿತಿ ಹಾಗೂ ಯಾವ ಯೋಜನೆ ಪರಿಣಾಮವಾಗಿ ಶಾಲೆಯಿಂದ ಹೊರಗೆ ಉಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಸಹಾಯವಾಗಿದೆ ಎಂಬ ಅಂಶವು ಅಧ್ಯಯನದ ಒಳಗೊಳ್ಳಬೇಕು ಎಂದು ಸೂಚಿಸಲಾಯಿತು.<br>4. ಯಾವುದೇ ಯೋಜನೆಯ ಮೌಲ್ಯಮಾಪನ ಉದ್ದೇಶ ಫಲಾನುಭವಿಗಳಿಗೆ ತಲುಪುವಲ್ಲಿ ಆಗುವ ತೊಡಕುಗಳನ್ನು ಕಂಡು ಹಿಡಿಯುವುದರೊಂದಿಗೆ ನೀತಿ ಬದಲಾವಣೆ ಸಂಬಂಧಿಸಿದ ಇಲಾಖೆಗೆ ಶಿಫಾರಸ್ಸು ಮಾಡುವುದು ಆಗಿರಬೇಕು ಎಂದು ಸೂಚಿಸಲಾಯಿತು.<br>5. MPI ಸೂಚಂಕ್ಯಗಳನ್ನು ಒಳಗೊಂಡಂತೆ ದತ್ತಾಂಶದಿಂದ ಮೌಲ್ಯ ಮಾಪನ ಅಧ್ಯಯನವು ಪೂರಕವಾಗಬೇಕು ಎಂದು ಸೂಚಿಸಲಾಯಿತು.<br>6. ಶಾಲಾ ಶಿಕ್ಷಣ ಇಲಾಖೆಯನ್ನು ಹೊರತು ಪಡಿಸಿ ಬೇರೆ ಇಲಾಖೆಗಳಿಂದ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಇತರೆ ಸೌಲಭ್ಯಗಳನ್ನು ಪ್ರಶ್ನಾವಳಿಯಲ್ಲಿ ಸೇರ್ಪಡಿಸಲು ಸೂಚಿಸಲಾಯಿತು<br>7. ಪ್ರೌಢ ಶಿಕ್ಷಣ ಹಂತದಲ್ಲಿ ವೃತ್ತಿ ಶಿಕ್ಷಣ ತರಬೇತಿ ನೀಡಿದ್ದಲ್ಲಿ Dropout ಕಡಿಮೆಗೊಳಿಸುವ ಮಾಹಿತಿಯನ್ನು ಅಧ್ಯಯನವು ಒಳಗೊಳ್ಳಬೇಕು ಎಂದು ಸೂಚಿಸಲಾಯಿತು.<br>8. ಗಣಿತ-ವಿಜ್ಞಾನ ವಿಷಯಗಳಿಂದ ಮಕ್ಕಳ ಶಾಲೆಯಿಂದ ಹೊರಗುಳಿಯುತ್ತಿರುವುದೋ ಎಂಬ ಅಂಶವನ್ನು ಅಧ್ಯಯನದಲ್ಲಿ ಒಳಗೊಳ್ಳಬೇಕು.<br>9. ಶಾಲಾ ಮಕ್ಕಳ ಪಾಲಕರ Skills-Artisans ಮಾಹಿತಿ ಕುರಿತು ಪ್ರಶ್ನಾವಳಿಯಲ್ಲಿ ಸೇರಿಸಲು ಸೂಚಿಸಲಾಯಿತು. |
| **ಕರಡು ಮೌಲ್ಯಮಾಪನ ವರದಿಗಳು** | | |
| 1 | Evaluation of Samruddhi Scheme in Karnataka from 2018-19 to 2021-22 | ಸಮಿತಿಯ ಮುಂದೆ ಮಂಡಿಸಲಾದ ಅಧ್ಯಯನದ ಕರಡು ಮೌಲ್ಯಮಾಪನ ವರದಿಯನ್ನು, ಸಂಬಂಧಪಟ್ಟ ಇಲಾಖೆ, ಸ್ವತಂತ್ರ ಮೌಲ್ಯಮಾಪಕರು ಹಾಗೂ ಪ್ರಾಧಿಕಾರದಿಂದ ನೀಡುವ ಸಲಹೆ/ಸೂಚನೆಗಳನ್ನು ಅಳವಡಿಸಿ ಅನುಸರಣಾ ವರದಿಯೊಂದಿಗೆ |

| | | |
|---|---|---|
| | **ಯೋಜನೆ ಅನುಷ್ಠಾನ ಇಲಾಖೆ:**<br>ಆದಿ ಜಾಂಬವ ಅಭಿವೃದ್ಧಿ ನಿಗಮ & ಬಾಬು ಜಗಜೀವನ್ ರಾಂ ಸಂಶೋಧನಾ ಸಂಸ್ಥೆ<br><br>**ಅಧ್ಯಯನದ ಅವಧಿ**<br>01-08-2022 ರಿಂದ 30-11-2022 | ಪರಿಷ್ಕೃತ ವರದಿಯನ್ನು ಸಲ್ಲಿಸುವ ಷರತ್ತಿಗೆ ಒಳಪಟ್ಟು ಅನುಮೋದಿಸಲಾಯಿತು. |
| 2 | Evaluation of National Mission for Sustainable Agriculture – Rainfed Area Development (NMSA-RAD) in Karnataka from 2014-15 to 2019-20<br><br>**ಯೋಜನೆ ಅನುಷ್ಠಾನ ಇಲಾಖೆ:**<br>ಜಲಾನಯನ ಅಭಿವೃದ್ಧಿ ಇಲಾಖೆ<br><br>**ಅಧ್ಯಯನದ ಅವಧಿ**<br>26-11-2021 ರಿಂದ 26-05-2022 | ಸಮಿತಿಯ ಮುಂದೆ ಮಂಡಿಸಲಾದ ಅಧ್ಯಯನದ ಕರಡು ಮೌಲ್ಯಮಾಪನ ವರದಿಯನ್ನು, ಈ ಕೆಳಗಿನ ಸಲಹೆ/ಸೂಚನೆಗಳನ್ನು ಅಳವಡಿಸಿ ಅನುಸರಣಾ ವರದಿಯೊಂದಿಗೆ ಸಲ್ಲಿಸುವ **ಪರಿಷ್ಕೃತ ವರದಿಯನ್ನು ತಾಂತ್ರಿಕ ಸಮಿತಿಯ ಸದಸ್ಯರಿಗೆ ಇ-ಮೇಲ್ ಮೂಲಕ ಕಳುಹಿಸಿ ಅನುಮೋದನೆ ಪಡೆಯುವ** ಷರತ್ತಿಗೆ ಒಳಪಟ್ಟು ಅನುಮೋದಿಸಲಾಯಿತು.<br>1) ಕರಡು ಮೌಲ್ಯಮಾಪನ ವರದಿಯಲ್ಲಿ ನೀಡಿರುವ ಶಿಫಾರಸ್ಸುಗಳು, ಸಾಮಾನ್ಯವಾಗಿದ್ದು, (General Statements), ಸಮಾಲೋಚಕ ಸಂಸ್ಥೆಯು ಕೈಗೊಂಡ ಮೌಲ್ಯಮಾಪನ ಅಧ್ಯಯನದ ಶೋಧನೆಗಳನ್ನು ಆಧರಿಸಿ, "ಕೃಷಿ ಹವಾಮಾನ ವಲಯವಾರು, ಕೃಷಿ ಸಂಬಂಧಿತ ವಲಯವಾರು, ಜಿಲ್ಲಾವಾರು ನಿರ್ದಿಷ್ಟ ಶಿಫಾರಸ್ಸುಗಳನ್ನು ನೀಡಲು ತಿಳಿಸಲಾಯಿತು.<br>2) ಯೋಜನೆಯ ವಿವಿಧ ಘಟಕಗಳ ಅನುಷ್ಠಾನದಿಂದ ರೈತರಿಗೆ ಆದ ಉಪಯುಕ್ತತೆಯನ್ನು ಅಧ್ಯಯನದ ದತ್ತಾಂಶ ವಿಶ್ಲೇಷಣೆ ಆಧರಿಸಿ ಪ್ರಾಮುಖ್ಯತೆಗೆ ಅನುಗುಣವಾಗಿ ಮುಖ್ಯ ಘಟಕಗಳನ್ನು ಶಿಫಾರಸ್ಸು ಮಾಡಲು ತಿಳಿಸಲಾಯಿತು.<br>3) ಅಧ್ಯಯನದಲ್ಲಿ ಗುರುತಿಸಲಾದ ಜಿಲ್ಲಾವಾರು, ಫಲಾನುಭವಿಯ ಉಪಯುಕ್ತತೆಯಲ್ಲಿ ಪ್ರತಿ ಜಿಲ್ಲೆಗೆ ಸಂಬಂಧಿಸಿದಂತೆ, ವಸ್ತು ಸ್ಥಿತಿಗೆ ಸ್ಪಷ್ಟೀಕರಣ ನೀಡಲು ತಿಳಿಸಲಾಯಿತು.<br>4) ಸದರಿ ಯೋಜನೆಯ ಅನುಷ್ಠಾನದಲ್ಲಿ ಇತರೆ ರಾಜ್ಯಗಳು ಅಳವಡಿಸಲಾದ ಉತ್ತಮ ಪದ್ಧತಿಗಳನ್ನು (Best Practices) ವರದಿಯಲ್ಲಿ ದಾಖಲಿಸಲು ಸೂಚಿಸಲಾಯಿತು.<br>5) ಯೋಜನೆಗೆ ಸಂಬಂಧಿಸಿದಂತೆ ನೀತಿ ಬದಲಾವಣೆಗಳನ್ನು ಶಿಫಾರಸ್ಸು ಮಾಡಲು ತಿಳಿಸಲಾಯಿತು. |

| | | |
|---|---|---|
| | | 6) ರೈತ ಉತ್ಪಾದಕ ಸಂಸ್ಥೆಗಳನ್ನು ಜಿಲ್ಲಾವಾರು, ಉತ್ಪನ್ನಗಳವಾರು ಮಾರುಕಟ್ಟೆ ಸೌಲಭ್ಯ ಆಧರಿಸಿ ಶಿಫಾರಸ್ಸು ನೀಡಲು ತಿಳಿಸಲಾಯಿತು. |

(ಡಾ.ರಿಚರ್ಡ್ ವಿನ್ಸೆಂಟ್ ಡಿಸೋಜ, ಭಾ.ಆ.ಸೇ.,)
ಸದಸ್ಯ ಕಾರ್ಯದರ್ಶಿಗಳು, ತಾಂತ್ರಿಕ ಸಮಿತಿ,
ಮತ್ತು ಮುಖ್ಯ ಮೌಲ್ಯಮಾಪನಾಧಿಕಾರಿಗಳು
ಕರ್ನಾಟಕ ಮೇಲ್ವಿಚಾರಣೆ & ಮೌಲ್ಯಮಾಪನ ಪ್ರಾಧಿಕಾರ

(ಡಾ.ಶಾಲಿನಿ ರಜನೀಶ್, ಭಾ.ಆ.ಸೇ.,)
ತಾಂತ್ರಿಕ ಸಮಿತಿಯ ಅಧ್ಯಕ್ಷರು ಹಾಗೂ ಸರ್ಕಾರದ ಅಪರ
ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ